ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]
ಒಟ್ಟು ಪ್ರಶ್ನೆಗಳ ಸಂಖ್ಯೆ : 25 + 25 ]
Total No. of Questions : 25 + 25 ]

**ಸಂಕೇತ ಸಂಖ್ಯೆ : 98-K**
**Code No. : 98-K**

# A

**CCE RF**
**CCE RR**

Question Paper Serial No. **101**

ಇಲ್ಲಿಂದ ಕತ್ತರಿಸಿ

# ವಿಷಯ : ಕರ್ನಾಟಕ ಸಂಗೀತ / ಹಿಂದೂಸ್ಥಾನಿ ಸಂಗೀತ — ಶಾಸ್ತ್ರ ವಿಭಾಗ

## Subject : CARNATIC MUSIC / HINDUSTANI MUSIC — THEORY

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಅಭ್ಯರ್ಥಿ & ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh & Regular Repeater)**

**(ಕರ್ನಾಟಕ ಸಂಗೀತ ಅಥವಾ ಹಿಂದೂಸ್ಥಾನಿಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದು)**

ದಿನಾಂಕ : 11. 04. 2022 ] [ Date : 11. 04. 2022

ಸಮಯ : ಮಧ್ಯಾಹ್ನ 2-00 ರಿಂದ ಸಂಜೆ 3-45 ರವರೆಗೆ ] [ Time : 2-00 P.M. to 3-45 P.M.

ಗರಿಷ್ಠ ಅಂಕಗಳು : 40 ] [ Max. Marks : 40

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 25 + 25 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

# (ಕರ್ನಾಟಕ ಸಂಗೀತ)

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : **8 × 1 = 8**

1. ಕರ್ನಾಟಕ ಸಂಗೀತಕ್ಕಿರುವ ಇನ್ನೊಂದು ಹೆಸರು

   (A) ಉತ್ತರಾದಿ ಸಂಗೀತ

   (B) ಸುಗಮ ಸಂಗೀತ

   (C) ದಕ್ಷಿಣಾದಿ ಸಂಗೀತ

   (D) ಲಘು ಸಂಗೀತ

2. 'ಸ' (ಷಡ್ಜ) ಸ್ವರವು ಒಂದು ಪ್ರಕೃತಿ ಸ್ವರ, ಏಕೆಂದರೆ, ಆ ಸ್ವರವು

   (A) ಬದಲಾವಣೆ ಹೊಂದುತ್ತದೆ

   (B) ಬದಲಾವಣೆ ಹೊಂದುವುದಿಲ್ಲ

   (C) ಅನುಸ್ವರವಾಗಿದೆ

   (D) ಸ್ಥಾಯಿಯನ್ನು ಹೊಂದಿಲ್ಲ

3. ತಿಶ್ರ ಜಾತಿ ತ್ರಿಪುಟ ತಾಳದಲ್ಲಿನ ಒಂದು ಆವರ್ತದಲ್ಲಿರುವ ಅಕ್ಷರಗಳ ಸಂಖ್ಯೆ

   (A) 4  (B) 5

   (C) 9  (D) 7

4. 'ಮಾಯಾಮಾಳವಗೌಳ' ರಾಗವನ್ನು ಸಂಪೂರ್ಣ ರಾಗವೆಂದು ಕರೆಯುವರು. ಕಾರಣ ಈ ರಾಗದ ಆರೋಹಣ ಮತ್ತು ಅವರೋಹಣಗಳಲ್ಲಿ

(A) ಏಳು–ಏಳು ಸ್ವರಗಳಿವೆ

(B) ಆರು–ಆರು ಸ್ವರಗಳಿವೆ

(C) ಐದು–ಐದು ಸ್ವರಗಳಿವೆ

(D) ಶುದ್ಧ ಸ್ವರಗಳಿವೆ

5. ಚತುರಶ್ರಜಾತಿ ಏಕತಾಳದ ಒಂದು ಆವರ್ತದಲ್ಲಿ ನಾಲ್ಕು ಅಕ್ಷರಗಳಿವೆ. ಏಕೆಂದರೆ, ಈ ತಾಳದ ಲಘುವಿನಲ್ಲಿ

(A) ಮೂರು ಅಕ್ಷರಗಳಿವೆ

(B) ನಾಲ್ಕು ಅಕ್ಷರಗಳಿವೆ

(C) ಐದು ಅಕ್ಷರಗಳಿವೆ

(D) ಏಳು ಅಕ್ಷರಗಳಿವೆ

6. ಬಸವಣ್ಣನವರ ಜನ್ಮಸ್ಥಳ

(A) ಬಾಡ

(B) ಭಾಗಮಂಡಲ

(C) ಬಾಗೇವಾಡಿ

(D) ಬಂಕಾಪುರ

7. 'ತಂಬೂರಿ' ಒಂದು

(A) ಶೃತಿ ವಾದ್ಯ

(B) ತಾಳ ವಾದ್ಯ

(C) ಘನ ವಾದ್ಯ

(D) ಸುಷಿರ ವಾದ್ಯ

8. ಅಕ್ಕಮಹಾದೇವಿಯು ತನ್ನ ಪತಿಯನ್ನು ತ್ಯಜಿಸಿದಳು. ಏಕೆಂದರೆ, ಆಕೆಯ ಪತಿಯು

(A) ಷರತ್ತುಗಳನ್ನು ಮುರಿದನು

(B) ಆಕೆಯ ಮೇಲೆ ಕೋಪಗೊಂಡನು

(C) ಆಕೆಯನ್ನು ಬಳಹಷ್ಟುಬಾರಿ ನಿರ್ಲಕ್ಷಿಸುತ್ತಿದ್ದನು

(D) ಸೋಮಾರಿಯಾಗಿದ್ದನು

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರಿಸಿ : 8 × 1 = 8**

9. ಆರೋಹಣವೆಂದರೇನು ?

10. ಮೇಚಕಲ್ಯಾಣಿ ರಾಗದ ಮೇಳಕರ್ತ ಸಂಖ್ಯೆಯನ್ನು ಬರೆಯಿರಿ.

11. ಕರ್ನಾಟಕ ಸಂಗೀತದ ಮೋಹನ ರಾಗವನ್ನು ಹಿಂದೂಸ್ಥಾನಿ ಪದ್ಧತಿಯಲ್ಲಿ ಯಾವ ಹೆಸರಿನಿಂದ ಕರೆಯುವರು ?

12. ಕಾಂಭೋಜಿ ರಾಗವನ್ನು ಭಾಷಾಂಗ ರಾಗವೆಂದು ಕರೆಯಲು ಕಾರಣವೇನು ?

13. ಧ್ರುವತಾಳ ಮತ್ತು ಮಠ್ಯತಾಳಗಳ ನಡುವಿನ ಯಾವುದಾದರೂ ಒಂದು ವ್ಯತ್ಯಾಸವನ್ನು ಬರೆಯಿರಿ.

14. ಕನಕದಾಸರ ತಂದೆ–ತಾಯಿಯರ ಹೆಸರೇನು ?

15. ಖಂಡಜಾತಿ ಅಟತಾಳದ ಒಂದು ಆವರ್ತದಲ್ಲಿ ಎಷ್ಟು ಅಕ್ಷರಗಳಿವೆ ?

16. ವಸಂತರಾಗವನ್ನು ವಕ್ರರಾಗವೆಂದು ಕರೆಯಲು ಕಾರಣವೇನು ?

**III. ಕೆಳಗಿನ ಪ್ರಶ್ನೆಗಳಿಗೆ *ಎರಡರಿಂದ ಮೂರು* ವಾಕ್ಯಗಳಲ್ಲಿ ಉತ್ತರಿಸಿ : 7 × 2 = 14**

17. ಮಾರ್ಗ ಹಾಗೂ ದೇಶೀ ಸಂಗೀತಗಳ ನಡುವಿನ ಒಂದು ವ್ಯತ್ಯಾಸವನ್ನು ಬರೆಯಿರಿ.

18. ಕರ್ನಾಟಕ ಸಂಗೀತ ಪದ್ಧತಿ ಹಾಗೂ ಹಿಂದೂಸ್ಥಾನಿ ಸಂಗೀತ ಪದ್ಧತಿಗಳ ನಡುವಿನ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಬರೆಯಿರಿ.

19. ಮಿಶ್ರಜಾತಿ ಝುಂಪೆತಾಳದ ಒಂದು ಆವರ್ತದಲ್ಲಿನ ಅಕ್ಷರಗಳ ಸಂಖ್ಯೆ 10. ಏಕೆ ?

20. ಬಸವಣ್ಣನವರು ತಮ್ಮ ವಚನಗಳ ಕೊನೆಯಲ್ಲಿ 'ಕೂಡಲ ಸಂಗಮದೇವ'ನನ್ನು ಸ್ಮರಿಸಲು ಕಾರಣವೇನು ?

21. ರಿಷಭ ಸ್ವರ ಪ್ರಭೇದಗಳು ಗಾಂಧಾರ ಸ್ವರ ಪ್ರಭೇದಗಳಿಗಿಂತ ಹೇಗೆ ಭಿನ್ನವಾಗಿವೆ ?

22. ಈ ಕೆಳಗಿನ ಅಂಕಿತಗಳನ್ನು ಆಯಾ ರಚನಕಾರರ ಹೆಸರುಗಳೊಂದಿಗೆ ವಿಂಗಡಿಸಿ ಬರೆಯಿರಿ :

ಗುರುಗುಹ, ಶ್ಯಾಮಕೃಷ್ಣ, ಕಾಗಿನೆಲೆಯಾದಿಕೇಶವ, ಚೆನ್ನಮಲ್ಲಿಕಾರ್ಜುನ.

23. ಔಡವ ರಾಗವು ಷಾಡವ ರಾಗಕ್ಕಿಂತ ಹೇಗೆ ಭಿನ್ನವಾಗಿದೆ ?

**IV. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :**

24. ಸಂಗೀತ ವಾದ್ಯಗಳ ವರ್ಗೀಕರಣವನ್ನು ಒಂದೊಂದು ಉದಾಹರಣೆಯೊಂದಿಗೆ ವಿವರಿಸಿ. **6**

25. ಚತುರಶ್ರಜಾತಿ ರೂಪಕತಾಳದ ಅಲಂಕಾರವನ್ನು ಸ್ವರಲಿಪಿಯೊಂದಿಗೆ ವಿನ್ಯಾಸಗೊಳಿಸಿ ಬರೆಯಿರಿ. **4**

# (ಹಿಂದೂಸ್ಥಾನಿ ಸಂಗೀತ)

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : 8 × 1 = 8**

1. ಸ್ವರಗಳ ಏರಿಕೆ ಕ್ರಮವೇ

   (A) ಆರೋಹಣ

   (B) ಅವರೋಹಣ

   (C) ಶೃತಿ

   (D) ನಾದ

2. ಪಂ. ಬಸವರಾಜ ರಾಜಗುರುರವರ ಜನ್ಮಸ್ಥಳ

   (A) ಮನಸೂರು

   (B) ಯಲಿವಾಳ

   (C) ಕುರಂದವಾಡ

   (D) ಪುರಂದರಗಡ

3. ಹಿಂದೂಸ್ಥಾನಿ ಸಂಗೀತವನ್ನು 'ಉತ್ತರಾದಿ ಸಂಗೀತ' ಎಂದು ಕರೆಯುವರು. ಏಕೆಂದರೆ, ಈ ಸಂಗೀತ ಪ್ರಕಾರವು

   (A) ದಕ್ಷಿಣ ಭಾರತದಲ್ಲಿ ಬೆಳೆದು ಬಂತು

   (B) ಉತ್ತರ ಭಾರತದಲ್ಲಿ ಬೆಳೆದು ಬಂತು

   (C) ಕರ್ನಾಟಕದಲ್ಲಿ ಬೆಳೆದು ಬಂತು

   (D) ಪ್ರಪಂಚದ ದಕ್ಷಿಣ ಭಾಗದಲ್ಲಿ ಬೆಳೆದು ಬಂತು

4. 'ಗಂಧರ್ವ ವೇದ' ಎಂದು ಕರೆಯಲ್ಪಡುವ ಕಲೆ

(A) ಸಂಗೀತ

(B) ನಾಟಕ

(C) ವಾಸ್ತುಶಿಲ್ಪ

(D) ಚಿತ್ರಕಲೆ

5. ಭೈರವಿ ರಾಗವನ್ನು 'ಸಂಪೂರ್ಣರಾಗ' ಎಂದು ಕರೆಯುವರು. ಏಕೆಂದರೆ, ಈ ರಾಗದಲ್ಲಿ

(A) ಐದು–ಐದು ಸ್ವರಗಳಿವೆ

(B) ಐದು–ಏಳು ಸ್ವರಗಳಿವೆ

(C) ಆರು–ಏಳು ಸ್ವರಗಳಿವೆ

(D) ಏಳು–ಏಳು ಸ್ವರಗಳಿವೆ

6. ಏಳು ಸ್ವರಗಳ ಸಮೂಹವೇ

(A) ಮುಖ್ಯಾಂಗ

(B) ಸಪ್ತಕ

(C) ವಾದಿಸ್ವರ

(D) ಪೂರ್ವಾಂಗ ಸ್ವರ

7. ಜೀವನ್‌ಪುರಿ ರಾಗದ ಗ, ಧ, ನಿ ಸ್ವರಗಳ ಕೆಳಗೆ ಅಡ್ಡಗೆರೆ ಕೊಡಲಾಗುವುದು. ಏಕೆಂದರೆ, ಅವು

(A) ಶುದ್ಧ ಸ್ವರಗಳು

(B) ತೀವ್ರ ಸ್ವರಗಳು

(C) ಕೋಮಲ ಸ್ವರಗಳು

(D) ವರ್ಜ್ಯ ಸ್ವರಗಳು

8. 'ಸಿತಾರ್' ಅನ್ನು 'ತತ್ ವಾದ್ಯ' ಎಂದು ಕರೆಯುವರು. ಏಕೆಂದರೆ, ಅದು

(A) ಮರದಿಂದ ಮಾಡಲ್ಪಟ್ಟಿದೆ

(B) ಹಿಂದೂಸ್ಥಾನಿ ಸಂಗೀತ ವಾದ್ಯವಾಗಿದೆ

(C) ಲೋಹ ವಾದ್ಯವಾಗಿದೆ

(D) ತಂತಿಗಳಿಂದ ನಾದೋತ್ಪತ್ತಿ ಮಾಡುತ್ತದೆ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ : 8 × 1 = 8**

9. ಝುಪ್ತಾಳದಲ್ಲಿ ಎಷ್ಟು ಮಾತ್ರೆಗಳಿವೆ ?

10. ಭೈರವ್ ರಾಗವನ್ನು 'ಉತ್ತರಾಂಗ ಪ್ರಧಾನರಾಗ' ಎಂದು ಕರೆಯುವರು. ಏಕೆ ?

11. ಖಯಾಲ್ ಅರ್ಥವನ್ನು ವ್ಯಾಖ್ಯಾನಿಸಿ.

12. ಪಂಡಿತ್ ಪಂಚಾಕ್ಷರಿ ಗವಾಯಿಗಳನ್ನು 'ಉಭಯ ಗಾಯನಾಚಾರ್ಯ' ಎಂದು ಕರೆಯಲು ಕಾರಣವೇನು ?

13. ಪಂಡಿತ್ ಮಲ್ಲಿಕಾರ್ಜುನ ಮನಸೂರರಿಗೆ ಭಾರತ ಸರ್ಕಾರ ನೀಡಿದ ಎರಡು ಪ್ರಶಸ್ತಿಗಳನ್ನು ಹೆಸರಿಸಿ.

14. ದುರ್ಗಾ ರಾಗವನ್ನು ಔಡವ–ಔಡವ ರಾಗ ಎಂದು ಕರೆಯಲು ಕಾರಣವೇನು ?

15. ದೇಸ್ ರಾಗದ ವಾದಿ ಸ್ವರವನ್ನು ಹೆಸರಿಸಿ.

16. ಪಂಡಿತ್ ವಿಷ್ಣು ದಿಗಂಬರ ಫಲುಸ್ಕರ್‌ರವರು ಕುರುಡರಾಗಲು ಕಾರಣವೇನು ?

**III. ಕೆಳಗಿನ ಪ್ರಶ್ನೆಗಳಿಗೆ *ಎರಡರಿಂದ ಮೂರು* ವಾಕ್ಯಗಳಲ್ಲಿ ಉತ್ತರಿಸಿ : 7 × 2 = 14**

17. ಕರ್ನಾಟಕ ಸಂಗೀತ ಮತ್ತು ಹಿಂದೂಸ್ಥಾನಿ ಸಂಗೀತದಲ್ಲಿ ಕಂಡುಬರುವ ಎರಡು ವ್ಯತ್ಯಾಸಗಳನ್ನು ಬರೆಯಿರಿ.

18. 'ಶಹನಾಯ್' ವಾದ್ಯವನ್ನು ಸುಷಿರವಾದ್ಯ ಎಂದು ಕರೆಯುವರು. ಏಕೆ ?

19. ಶೃತಿಗೊಳಿಸಿದ ತಂಬೂರಿಯು ಆಹತನಾದವನ್ನು ಉಂಟುಮಾಡುತ್ತದೆ. ಹೇಗೆ ?

20. ಸಂಗೀತವನ್ನು 'ಶ್ರವಣ ಸಾಧನ ವಿದ್ಯೆ' ಎಂದು ಕರೆಯುವರು. ಏಕೆ ?

21. ಈ ಕೆಳಗಿನ ವಾದ್ಯಗಳನ್ನು ಅವನದ್ಧ ಮತ್ತು ಘನವಾದ್ಯಗಳಾಗಿ ವರ್ಗೀಕರಣ ಮಾಡಿ ಬರೆಯಿರಿ :

ತಬಲ, ಕರತಾಳ, ಜಲತರಂಗ, ಪಖವಾಜ್.

22. ಸಂಗೀತಕ್ಕೆ ಲಿಪಿಯ ಅಗತ್ಯತೆ ಇದೆ. ಏಕೆ ?

23. ಈ ಕೆಳಗಿನ ತಾಳಗಳನ್ನು ಕರ್ನಾಟಕ ಸಂಗೀತ ಮತ್ತು ಹಿಂದೂಸ್ಥಾನಿ ಸಂಗೀತ ತಾಳಗಳಾಗಿ ವರ್ಗೀಕರಿಸಿ ಬರೆಯಿರಿ .

ದಾದರಾ, ಆದಿತಾಳ, ಭಜನ್ ಠೇಕಾ, ತ್ರಿಪುಟತಾಳ.

**IV. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :**

24. ತೀನ್‌ತಾಳ ಮತ್ತು ಚೌತಾಳ ಒಂದಕ್ಕೊಂದು ಭಿನ್ನ. ಹೇಗೆ ? ವಿವರಿಸಿ. ಈ ಎರಡು ತಾಳಗಳ ಮಾಹಿತಿಯನ್ನು ಠೇಕಾದೊಂದಿಗೆ ಬರೆಯಿರಿ. **6**

25. ಬೃಂದಾವನಿ ಸಾರಂಗ ರಾಗದ ಸ್ವರಗೀತೆಯನ್ನು ಸ್ವರಲಿಪಿಬದ್ಧಗೊಳಿಸಿ. **4**